ಸದರೀ ದರಖಾಸ್ತುದಾರನಾದ ಕಿಟ್ಟಿಮಲ್ಲಪ್ಪನ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿ ಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಜೂ೯ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1885ನೇ ಇಸವಿ ಆರ್ಜೀ ನಂಬರ್ 171.

ಮೃತಪಟ್ಟ ಕ್ಲೋಸ್‌ಪೇಟೆ ಕರಿನಲ ನರಸಿಂಹಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಕ್ಲೋಸ್‌ಪೇಟೆ ಧನ ಲಕ್ಷ್ಮಕ್ಕಮ್ಮ ಮೃತಪಟ್ಟ ಸದರೀ ಕರಿನಲ ನರಸಿಂಹಯ್ಯನಿಗೆ 2ನೇ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಕ್ಲೋಸ್‌ಪೇಟೆ ನಿವಾಸಿಯಾದ ಧನಲಕ್ಷ್ಮಕ್ಕಮ್ಮ ಸದರೀ ನಿವಾಸಿಯಾದ ಮಾಸನ್ಥನಾಗಿ ಮೃತಪಟ್ಟ ಕರಿನಲ ನರಸಿಂಹಯ್ಯನ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಧನಲಕ್ಷ್ಮಕ್ಕಮ್ಮನ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಿನಲ ನರಸಿಂಹಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಜೂ೯ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೇಸ್,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟ್ ಡೆ|| ಕಮ್ಮಿಷನರ್ ಕೋರ್ಟಿನಿಂದ.

ತಾರೀಖು 26ನೇ ಮೇ 1885.

ಇದರಿಂದ ಸಮಸ್ತರಿಗೂ ತಿಳಿಸುವದೇನೆಂದರೆ, ಡಿ|| ಪಿ|| ಮುದ್ದಗಿರಿ, ಪಾವಗಡ, ಕೆರಾ, ಗುಬ್ಬಿ, ತಿಪಟೂರು, ತುಮಕೂರು ಈ ತಾಲ್ಲೂಕುಗಳಲ್ಲಿ ಸ೯ 1885—86ನೇ ಪಾರ್ಥಿವ ಸಂವತ್ಸರದಲ್ಲಿ, ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜಮಾಯಿಸತಕ್ಕ ಹಕ್ಕನ್ನು ಆಯಾ ತಾಲ್ಲೂಕು ಆಮೀಲರ ರೂಬರೂ ತಾಲ್ಲೂಕು ಕಛೇರಿಯಲ್ಲಿ ಇದರಹೀಲಿ ಕಂಡ ತಾರೀಖುಗಳಲ್ಲಿ, ಬೆ|| 11 ಘಂಟೆ ಲಾಗಾಯಿತು ಹರಾಜು ಮಾಡಲಾಗೀತು.

ಷರತ್ತುಗಳು.

1. ಹರಾಜು ಕೈದಾದ ಕೂಡ್ಲೆ ಆಪೈರು ಸವಾಲುದಾರನು ಕೇಕಡಾ 25 ರೂಪಾಯಿ ಮೇರಿಗೆ ನಗದು ಠೇವಣೀಯನ್ನು ಇಡಬೇಕು, ಹರಾಜು ದಿವಾಸಾಹೆಬರಿಂದ ಮಂಜೂರಾದ ಪಡನೆ, 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ, ಪುನಹ ಹರಾಜು ಮಾಡಲ್ಪಟ್ಟು ನಷ್ಟಬಂದ ಮೊಬಲಗಿಗೆ ಮೊದಲಿನ ಚಡಸವಾಲುದಾರನನ್ನು ಗುರಿಮಾಡಲಾಗೀತು ಮತ್ತು ಠೇವಣೀಯನ್ನು ಸರಕಾರಕ್ಕೆ ಕೀರಿಸಿಕೊಳ್ಳಲಾಗೀತು.

2. ಕುರಂಗದಕಲ್ಲುಗಳನ್ನು ತೆಗಿಯುವ ಪೈದ್ದಿಕ್ಯ ಭೂಮಿ ಸಾಗುವಳ್ಗೆಗೆ ನಾಲಾಯಖಾಗುವೆಂತೆ ಮಾಡತಕೂಡದು, ಗುಂಡಿಗಳನ್ನು ಇಜಾರೆದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿ[illegible] ಭೂಮಿಯಲ್ಲಿ ಕುರಂಗದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳ್ಗೆಗೆ ಕೊಡಲಾಗೀತು, ಹಾಗೆ ಕೊಡೋಣದರಿಂದ ಕುರಂಗದ ಕಲ್ಲು ಇಜಾರೇದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್ದಾರರಲ್ಲ.

5. ಹರಾಜು ಮೊಬಲಗಿನ ಮೇಲೆ ಕೇಕಡಾ 6—4—0 ರೂಪಾಯಿ ಮೇರಿಗೆ ಲೊಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪೇಲು ತಿಳಿಯಬೇಕಾಗಿದ್ದರೆ, ಆಯಾ ತಾಲ್ಲೂಕು ಆಮೀಲರಿಗೆ ಬರದು ತಿಳಿಕ್ಕೊಳ್ಳಬಹುದು.

ಹರಾಜು ತಾರೀಖು.

ಮದ್ದಗಿರೀ ತಾಲ್ಲೂಕು	ಸ್ಯ॥ 1885ನೇ ಜುಲೈ	15
ಪಾವಗಡ ತಾಲ್ಲೂಕು	ಡಿಟೋ	26
ಶಿರಾ ತಾಲ್ಲೂಕು	ಡಿಟೋ	25
ಗುಬ್ಬಿ ತಾಲ್ಲೂಕು	ಡಿಟೋ	28
ತಿಪಟೂರು ತಾಲ್ಲೂಕು	ಡಿಟೋ	30
ತುಮಕೂರು ತಾಲ್ಲೂಕು	ಡಿಟೋ	27

ಪಿ. ಯರ್. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ನಂಬರು 3. ತಾರೀಖು 15ನೇ ಜುಲೈ 1885.

ಹುಣಸೂರು ಸಬ್ ರಿಜಿಸ್ಟ್ರಾರ್ರ ಆಫೀಸಿನಲ್ಲಿ ಟೀಪ್ ಪೆರಿಯಾಪಟ್ಣ ಸಬ್ ರಿಜಿಸ್ಟ್ರಾರ್ ಆಫೀಸ್, ಬಾಬತು ಮಾಲಿಕರು ಯಾರೂ ವಾಪ ಸ್ತೆಗದಕೊಳ್ಳದೆ ಬಾಕೀಲಿರುವ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನ ಕ್ರಮವಾದ ವಾರಸೆದಾರರಾಗಲಿ ಅಥವಾ ಆಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಎಂದು ತಿಂಗಳವಳಗಾಗಿ ಹಾಜರಾಗಿ ವಾಪಸು ಪಡಿಯಜೇಕು. ತಪ್ಪಿದಲ್ಲಿ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ವಿವರ.
39 82—83	ಪಟ್ಟದಪುರದ ವಾಸಸ್ಥ ಬ್ರಾಹ್ಮಣ ದೊಡ್ಡ ಪಟ್ಟ ರಣಪ್ಪನ ಮಗ ಪುಟ್ಟಣ್ಣಯ್ಯ	ಪಟ್ಟದಪುರವಲ್ಲಿರುವ ಪೋಣೇ ವೆಂಕಟಕೃಷ್ಣಯ್ಯನ ಮಗ ವೆಂಕಟರಮಣಯ್ಯ	1—7—82	5—7—82	100 ರೂಪಾಯಿನ ಭೂಮಿ ಆಧಾರ ಪತ್ರ.
111 82—83	ಅಬ್ಬೂರು ಗ್ರಾಮದಲ್ಲಿರುವ ಕುಂಬಾರ ಜಾತಿ ಕಾಳಪಟ್ಟ ಹೆಂಡತಿ ಮುನಿನಿಂಗಮ್ಮ, ಇವಳ ಸೊಸೆ ಕೆಂಪೀ ಸಹ	ಅಬ್ಬೂರುಗ್ರಾಮದಲ್ಲಿರುವ ಕುಂಬಾರ ಜಾತಿ ಸಂಜೀವಪಟ್ಟ ಮಗ ದಾಸಪಟ್ಟ	22—8—82	22—8—82	30 ರೂಪಾಯಿನ ಖಾಳಜಮ್ಮೀ ಕ್ರಯಪತ್ರ.
125 82—83	ಹುಲ್ಲಿಹಾಲ ಗ್ರಾಮದಲ್ಲಿರುವ ಮರಾಟೆ ಜಾತಿ ಮಂಜಾಫಿ ಬೊಬಡೆ ಮಗ ರಾವ್ ಬದಂ ತೋಜೆ ಬೊಬಡೆ	ಹುಲ್ಲಿಹಾಲ ಗ್ರಾಮದಲ್ಲಿರುವ ಮರಾಟೆಜಾತಿ ಸುಬ್ಬರಾವ್ ಬದಂ ಮಗ ಧಕೊವಂತರಾವ್ ಬದಂ	1—9—82	1—9—82	200 ರೂಪಾಯಿನ ಜಮ್ಮೀ ಕ್ರಯಪತ್ರ.
126 82—83	ಮುಳ್ಳೂರು ಗ್ರಾಮದಲ್ಲಿರುವ ಮರಾಟೆ ಜಾತಿ ರುದ್ರೋಜೆ ಬದಂ ಮಗ ಸುಬ್ಬರಾವು ಬದಂ	ಡಿಟೋ	ಡಿಟೋ	ಡಿಟೋ	100 ರೂಪಾಯಿನ ಮನೆ ಚಿದ್ದಭೋಗ್ಯ ಪತ್ರ.
143 82—83	ಕಾನೂರಲ್ಲಿರುವ ವಕ್ಕಲಿಗರ ವೆಂಕಟೆಗವ್ವಡನ ಮಗ ವೆಂಕಟೆಗವ್ವಡ	ಕಾನೂರಲ್ಲಿರುವ ವಕ್ಕಲಿಗರ ಜಾತಿ ದುಮ್ಮಿಗೌಡನ ಮಗ ಸುಬ್ಬೇಗೌಡ	19—9—82	19—9—82	132 [illegible]ಯಿನ ಜಮ್ಮೀ ಆಧಾರ ಪತ್ರ.

ಅಬ್ದುಲಖಾದರ್, ಕೆ. ಬಿ.,
ರಿಜಿಸ್ಟ್ರಾರ್.